**_ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಶಿಡ್ಲಘಟ್ಟ**

**ಅಸಲು ದಾವಾ ಸಂಖ್ಯೆ: 438 /2011**

**ಪಿ.ಡಬ್ಲ್ಯು.1**

**ದಿನಾಂಕ: 10-12-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀಸವಾಲು: ವಾದಿ ಪರ ವಕೀಲರಾದ ಶ್ರೀ.ಎಸ್.ಎ ರವರಿಂದ**

**ನಾನು ಎಮ್.ಎಸ್.ಸ್ಸಿ(ಅಗ್ರಿಕಲ್ಚರ್) ಓದಿರುತ್ತೇನೆ. ಡಿ.ಜಿ.ಆಂಜನೇಯ ರೆಡ್ಡಿರವರು 20 ವರ್ಷಗಳಿಂದ ಪರಿಚಯ ಇದೆ. ಡಿ.ಜಿ.ಆಂಜನೇಯರೆಡ್ಡಿರವರಿಗೆ ರಮೇಶಪ್ಪ ಎಂಬ ತಮ್ಮ ಇದ್ದಾರೆ. ಅವರು ಮೃತಪಟ್ಟು ಸುಮಾರು 8 ವರ್ಷಗಳಾಗಿದ್ದು ನಿಖರವಾದ ದಿನಾಂಕ ಗೊತ್ತಿಲ್ಲ. ಈ ಕೇಸು ಹಾಕುವ ಕಾಲಕ್ಕೆ ಆಂಜನೇಯರೆಡ್ಡಿರವರು ಬದುಕಿದ್ದರು. ಅವರ ಪತ್ನಿ 1ನೇ ಪ್ರತಿವಾದಿ.**

**ದಾವಾ ಸ್ವತ್ತು ಮೂಲತ: 1ನೇ ಪ್ರತಿವಾದಿಗೆ ಸೇರಿದ್ದು 1996-97ರಲ್ಲಿ 1ನೇ ಪ್ರತಿವಾದಿಗೆ ಸರ್ಕಾರದಿಂದ ದಾವಾ ಸ್ವತ್ತು ಮಂಜೂರಾಗಿದೆ. ಗ್ರ್ಯಾಂಟ್ ಸರ್ಟಿಫಿಕೇಟನ್ನು ನೋಡಿದ್ದೇನೆ. ಗ್ರ್ಯಾಂಟ್ ಸರ್ಟಿಫಿಕೇಟ್‌ನ ಮೂಲ ಪ್ರತಿ ನನ್ನ ಬಳಿ ಇದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಸದರಿ ದಾಖಲೆಯನ್ನು 1ನೇ ಪ್ರತಿವಾದಿ ಮತ್ತು ಅವರ ಗಂಡ ದಿನಾಂಕ:05.11.2005ಕ್ಕಿಂತ 3 ದಿನಗಳ ಮೊದಲು ಅವರ ಮನೆಯಲ್ಲಿ ನನಗೆ ನೀಡಿರುತ್ತಾರೆ. ಸದರಿ ಜಮೀನು 15 ವರ್ಷ ಪರಬಾರೆ ಮಾಡಬಾರದೆಂಬ ನಿಬಂದನೆಗೊಳಪಟ್ಟು ಮಂಜೂರಾಗಿದೆ. ದಾವಾ ಸ್ವತ್ತು 1ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು.**

**1ನೇ ಪ್ರತಿವಾದಿ ಓದಿದ್ದಾರೆ, ಎಷ್ಟು ಓದಿದ್ದಾರೆಂದು ಗೊತ್ತಿಲ್ಲ. ಆಂಜನೇಯ ರೆಡ್ಡಿ ಮತ್ತು ಅವರ ಕುಟುಂಬದವರು ಅವರ ಸ್ವತ್ತುಗಳನ್ನು ಮಾಡಿಕೊಂಡಿದ್ದಾರೆ ಆದರೆ ಯಾವಾಗ ಮಾಡಿಕೊಂಡಿದ್ದಾರೆಂದು ಗೊತ್ತಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ಕೆರೆ**

ಅಂಗಳ, ಪಶ್ಚಿಮಕ್ಕೆ ಬೈರಪ್ಪನವರ ಜಮೀನು, ಉತ್ತರಕ್ಕೆ 1ನೇ ಪ್ರತಿವಾದಿಯ ಗಂಡ ಆಂಜನೇಯರೆಡ್ಡಿ ಮತ್ತು ದಕ್ಷಿಣಕ್ಕೆ ಹಳ್ಳ ಇದೆ.

ದಾವಾ ಸ್ವತ್ತಿನ ಉತ್ತರಕ್ಕೆ ನಮಗೆ ಸೇರಿದ 7 ಎಕರೆ 35 ಗುಂಟೆ ಜಮೀನು ಇದೆ. ದಿನಾಂಕಃ05.11.2005ರಲ್ಲಿ ಸದರಿ ಸ್ವತ್ತನ್ನು ಪ್ರತಿವಾದಿಗಳಿಂದ ಕರೀದಿಸಿರುತ್ತಾರೆ. ದಾವಾ ಕೇಸು ಹಾಕುವ ಕಾಲಕ್ಕೆ ಉತ್ತರಕ್ಕೆ ನಮ್ಮದೇ ಜಮೀನು ಇದೆ ಎಂದು ಹೇಳಿದ್ದೀರ ಎಂದರೆ ಕರಾರು ಪತ್ರದಲ್ಲಿರುವಂತೆ ನಮೂದಿಸಿರುತ್ತಾರೆ. 2005ರಲ್ಲಿ 1 ಎಕರೆ ಜಮೀನಿಗೆ 45,000 ಬೆಲೆ ಇತ್ತು. 1 ಎಕರೆ ಜಮೀನಿಗೆ 45,000 ರೂ ಬೆಲೆ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿಲ್ಲ. ಸದರಿ ದಾಖಲೆಗಳನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ.

ಈ ಕೇಸು ಹಾಕುವ ಮೊದಲು ನಮ್ಮ ಮತ್ತು ಆಂಜನೇಯರೆಡಿರವರ ನಡುವೆ ವಿಶ್ವಾಸ ಇತ್ತು. ಕ್ರಯದ ಕರಾರು ಆಗುವ 3 ದಿನಗಳ ಮೊದಲು ನಮ್ಮ ಮನೆಯಲ್ಲಿ ಮಾತುಕತೆ ನಡೆದಿತ್ತು. ಆ ಸಮಯದಲ್ಲಿ 1 ರಿಂದ 3ನೇ ಪ್ರತಿವಾದಿ, ಆಂಜನೇಯರೆಡ್ಡಿ, ಗೋಪಾಲರೆಡ್ಡಿ ಮತ್ತು ಚಿಕ್ಕಪ್ಪಯ್ಯ ಎನ್ನುವವರು ಬಂದಿದ್ದರು. 100ರೂ ಮುಖಬೆಲೆಯ ಸ್ಟ್ಯಾಂಪ್ ಪೇಪರನ್ನು ಕರಾರಾಗುವ 2 ದಿನಗಳ ಮೊದಲೇ ಆಂಜನೇಯರೆಡ್ಡಿರವರು ತಂದಿದ್ದರು. ಮಾತುಕತೆ ಸಮಯದಲ್ಲಿ 1,33,500 ರೂಗಳಿಗೆ ನಿರ್ಧರಿಸಲಾಯಿತು. ಈ ವಿಷಯವನ್ನು ಈ ದಾವೆಯಲ್ಲಿ ಹೇಳಿರುತ್ತೇನೆ. ಸ್ಟ್ಯಾಂಪ್ ಪೇಪರನ್ನು ಆಂಜನೇಯರೆಡ್ಡಿರವರು ಶಿಡ್ಲಘಟ್ಟದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಿಂದ ತಂದಿರುತ್ತಾರೆ.

ನಿಪಿ.11ನ್ನು ನೋಂದಣಿ ಮಾಡಿಸಲು ಜಮೀನಿನ ನಿಬಂದನೆಯ ಅವದಿ ಮುಗಿಯದಿದ್ದ ಕಾರಣ ಮಾಡಿಸಿಲ್ಲ. ಈ ಬಗ್ಗೆ ಉಪನೋಂದಣಾದಿಕಾರಿ ಕಛೇರಿಯಲ್ಲಿ ಹಿಂಬರಹ ನೀಡಿದ್ದಾರೆಂದರೆ ನಾವು ಕೇಳಲು ಹೋಗಲಿಲ್ಲ. ಮೊದಲು ನಿಪಿ.11ನ್ನು ಮಾಡಲಾಗಿತ್ತು. ನಿಪಿ.11ನ್ನು ಶಿಡ್ಲಘಟ್ಟದ ಹಳೆ ತಾಲೂಕು ಕಚೇರಿಯಲ್ಲಿ ಬೆಳಗ್ಗೆ 10.30 ರಿಂದ 11.00 ಗಂಟೆ ಸಮಯದಲ್ಲಿ ಮಾಡಲಾಗಿತ್ತು. ಆ ಸಮಯದಲ್ಲಿ 1ನೇ ಪ್ರತಿವಾದಿ ಅವರ ಮಕ್ಕಳು, ಆಂಜನೇಯರೆಡ್ಡಿ, ಗೋಪಾಲರೆಡಿ, ಚಿಕ್ಕಪ್ಪಯ್ಯ ಇದ್ದರು.

**ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀಸವಾಲಿಗಾಗಿ ಮುಂದೂಡಲಾಯಿತು.**

**(ತೆರೆ ದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖ ನದಂತೆ ಸಾಕ್ಷಿಯ ಹೇಳಿ ಕೆಯನ್ನು ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

**(ಶ್ರೀಮತಿ. ರೋಹಿಣಿ. ಡಿ)**
**ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ**
**ಶಿಡ್ಲಘಟ್ಟ.**